ಶ್ರೀ ಕೆ. ಹೆಚ್. ಹನುಮೇಗೌಡ : ನಾನು ನಮ್ಮ ಹಾಸನ ಟೌನ್ ವಿಚಾರದಲ್ಲಿ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಅದು ಏನಾಯಿತು ಎಂಬುದು ಗೊತ್ತಾಗಲಿಲ್ಲ.

ಅಧ್ಯಕ್ಷರು : ಅದನ್ನು ಕಾಲ್ ಅಟೆನ್‌ಷನ್ ನೋಟೀಸಾಗಿ ಪರಿಗಣನೆ ಮಾಡಿ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಹೇಳುತ್ತೇನೆ.

RATION SUPPLY THROUGH THE JANATA BAZARS IN BANGALORE

ಶ್ರೀ ಎಂ. ಎನ್. ಕೃಷ್ಣನ್ : ಬೆಂಗಳೂರು ನಗರದಲ್ಲಿನ ಆಹಾರ ಧಾನ್ಯಗಳ ವಿಚಾರದಲ್ಲಿ ಒಂದು ನಿಲುವಳಿ ಸೂಚನೆಯನ್ನು ನಾನು ತಮಗೆ ಕಳುಹಿಸಿದ್ದೆ. ಅದು ಏನಾಯಿತು ಎಂಬುದು ಗೊತ್ತಾಗಲಿಲ್ಲ. ಅದರಲ್ಲಿ ಮುಖ್ಯವಾಗಿ ಬೆಂಗಳೂರು ನಗರದಲ್ಲಿ ಈಗ 4-5 ಜನತಾ ಬಜಾರಗಳಲ್ಲಿ ಆಹಾರಧಾನ್ಯಗಳನ್ನು ಮಾರಾಟ ಮಾಡುತ್ತಿದ್ದಾರೆ. ಎಲ್ಲಾ ಜನಗಳು ಆ ಜನತಾ ಬಜಾರುಗಳಿಗೇ ಬರಬೇಕಾದರೆ ಬಹಳ ಕಷ್ಟವಾಗಿದೆ.

ಅಧ್ಯಕ್ಷರು : ಆಹಾರ ಖಾತೆಯ ರಾಜ್ಯ ಮಂತ್ರಿಗಳು ಬರಲಿ ಅವರು ಬಂದಮೇಲೆ ಅವರು ಈ ಬಗ್ಗೆ ಸ್ಟೇಟ್‌ಮೆಂಟ್ ಮಾಡುವುದಕ್ಕೆ ತಿಳಿಸಲು ಪ್ರಯತ್ನ ಮಾಡೋಣ.

Statement by the Minister for Agriculture and Forests :— Re : Shortage of fertilisers in the State ;

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಅಧ್ಯಕ್ಷರೇ ನಾನು ತಮಗೆ ಗೊಬ್ಬರದ ಬಗ್ಗೆ ಒಂದು ಅಟೆನ್‌ಷನ್ ನೋಟೀಸು ಕಳುಹಿಸಿದ್ದೆ. ಈಗ ನಮ್ಮ ಹಾಸನ ಜಿಲ್ಲೆಯಲ್ಲಿ ಬತ್ತದ ಪೈರನ್ನು ನಾಟಿ ಹಾಕುವ ಕಾಲ. ಈಗ ಅಲ್ಲಿನ ರೈತರಿಗೆ ಗೊಬ್ಬರವನ್ನು ಕೊಟ್ಟರೆ ಒಳ್ಳೆಯದು. ಆಮೇಲೆ ಅವರಿಗೆ ಗೊಬ್ಬರವನ್ನು ಕೊಟ್ಟರೆ ಪ್ರಯೋಜನವಿಲ್ಲ. ಈಗ ಒಂದು ತಿಂಗಳಿಂದ ಹಾಸನ ಜಿಲ್ಲೆಯಲ್ಲಿ ಒಂದು ಕೆ. ಜಿ. ಗೊಬ್ಬರ ಸಿಕ್ಕುತ್ತಿಲ್ಲ. ಅಗ್ರಿಕಲ್ಚರಲ್ ಆಫೀಸು ಮತ್ತು ತಾಲ್ಲೂಕು ಸೊಸೈಟಿಗಳಿಗೆ ರೈತರು ಗೊಬ್ಬರಕ್ಕೆ ಹೋಗಿ ಸಿಕ್ಕದೆ ತಿರುಗಿ ವಾಪಸ್ಸು ಬರುತ್ತಿದ್ದಾರೆ. ರೈತರಿಗೆ ಗೊಬ್ಬರವನ್ನು ಕೊಡದಿದ್ದರೆ ರೈತ ಹೇಗ ವ್ಯವಸಾಯ ಮಾಡಿ ಹೆಚ್ಚು ಉತ್ಪಾದನೆ ಮಾಡಿ ಸಾಲ ಸೋಲಗಳನ್ನು ತೀರಿಸುವುದಕ್ಕೆ ಅವಕಾಶವಾಗುತ್ತದೆ? ಸರ್ಕಾರದವರು ಆ ಕಡೆ ಗಮನ ಕೊಡದಿದ್ದರೆ ರೈತ ಹೀನಸ್ಥಿತಿಗೆ ಬರುತ್ತಾನೆ ಎಂದು ನಾನು ಈ ಕಡೆ ಸರ್ಕಾರದ ಗಮನವನ್ನು